(6.) ಡಿಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ನಮೂದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಆಖೈರೊಳಗಾಗಿ ಪೂರ್ಣವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲೆ ಆದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಒಂದು ರೂಪಾಯಿನ ಛಾಪಾ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ಯೇ ತಾರೀಖಿನಲ್ಲಿ ಕರಾರ್ ಬರೆದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವಂದರೆ.

(1) ಬಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನ ಕಡಿಯುವದಿಲ್ಲ.

(2) ಕಡಿಯುವ ವಿಷಿಷ್ಟ ಮೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನ ನಿಶ್ಶೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಹೊಬ್ಬಡೆಯನ್ನ ತೆಗೆಯದೆ ಬಿಸಾಡುವದಿಲ್ಲ.

(3) ಚಕ್ಕೆಯನ್ನ ತೆಗೆದನಂತರ ವಿಷಿಷ್ಟ ಸಾದೆಯೂ ಇಜಾರದಾರನಿಗೆ ಕೀರಿದ್ದೇ ತಿವಾಯಿ ಸರ್ಕಾರಕ್ಕೆ ಕೀದ್ದಲ್ಲ.

(4) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರಿ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಯೀಲಾಗಿ ಲೆಕ್ಕ ಇಡುತ್ತೇನೆ ಯಪ್ಪಿದೆ ಈ ಬಾಬತು ಲೆಕ್ಕವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಯೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಷಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರೊಳಗಾಗಿ ನಿಶ್ಶೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟ್ ಮತ್ತು ಪ್ರೈವೇಟೇಸ್ಟಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕೆಡೆ ಜನಗಳಿಂದಲಾಗಲಿ ಬೆಂಕಿಯ ಅಥವಾ ಇನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲಗಳು ನಾಶವಾದಲ್ಲಿ ಅದರಿಂದ ಪುಟಿಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿಧೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಅದುವರೆಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಪ್ತಿ ಮಾಡಿಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನ ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಫಾರ್ ಡಿಪ್ಯುಟಿ ಕಮ್ಮಿಷನರ್.

ಫ್ರೆಚರಾಕ್ಸ್ ಸಬ್ ಡಿವಿಜ್.

ಪ್ರಸಿದ್ಧ ಪತ್ರಿಕೆ.

ತಾರೀಖು 2ನೇ ಏಪ್ರಿಲ್ 1896.

I. ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ಬಳಿ ಹೇಮಾವತಿ ನದಿಗೆ ಆಣೆಕಟ್ಟು ಕಟ್ಟಲು ಕಾಂಗಾರಿ ಉದ್ದಿಶ್ಯ 96ನೇ ಇಸವಿ ಏಪ್ರಿಲ್ ಮಾಹೆ 17ನೇ ತಾರೀಖು ವರೆವಿಗೂ ದರಖಾಸ್ತುಗಳು ಫ್ರೆಚರಾಕ್ಸ್ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್‌ಸಾಹೇಬರವರಿಂದ ತಗದುಕೊಳ್ಳಲ್ಪಡತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಪಟಿಂಗಳ ಪೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದುನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಟ್ರಾಕ್ಟುಗಾರಿಯು 1897ನೇ ಇಸವಿ ಜೂನ್ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ಮತ್ತು ಅಂದಾಜು ಪತ್ರಕ್ಕು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರಾತಃಕಾಲ 11 ಘಂಟೇ ಲಾಗಾಯತು ಸಾಯಂಕಾಲ 4 ಘಂಟೇವರೆಸಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರೆಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಪಟಿಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ.
ಮಣ್ಣು ಕೆಲಸ	ಸಲೆ ಗಜ 1ಕ್ಕೆ	16,000	
ಕಲ್ಲು ಕೆಲಸ			

IV. ಪ್ರತಿ ಬಂದು ದರಖಾಸ್ತಿನ ಸಂಗಡಲೂ 1000 ರೂಪಾಯಿಗಳ ಕರ್ಣಾಟ ನೋಟುಗಳಾಗಲಿ, ಗವರ್ನ್‌ಮೆಂಟ್ ಪ್ರಾಂಸರೀ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖ್ಖೋಟೇ ಮೇಲೆ "ಕಲ್ಲಹಳ್ಳಿ ಅಣೆ ಕಾಂಗಾರೀ ಬಗ್ಗೆ ದರಖಾಸ್ತಿಂಬದಾಗಿ" ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿರಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ, ಚೀಫ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೇಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಯಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕರ್ಣಾಟ್ಕ ಬ್ಯಾಂಕ್ ಎಂಬ ಕರಾರು ಪತ್ರವನ್ನು ಬರದು ಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾಡಲ್ಪಟ್ಟು ತೇವಣಾತೀ ಹಣವನ್ನು ಸರಕಾರಕ್ಕೆ ಜೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತು ದೊರೆನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕ್ಕಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾಗಲೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವು ಅವರಿಗೆ ವಾಪಸ್ ಮಾಡಲ್ಪಡುತ್ತೆ.

IX. ಅನುಗುಣವಾದ ಕಲ್ಲುಗಳು ಕೆಲಸದ ಬಳಿಯಲ್ಲಿ ಕಟ್ಟಲು ಸುರ್ತಾರದಿಂದಲೇ ಕಂಟ್ರಾಕ್ಟದಾರರಿಗೆ ಸಪ್ಲೈಮಾಡಲ್ಪಡುತ್ತೆ. ಹಾಲಿ ಟೆಂಡರು, ಗಾರೆಯನ್ನು ಸಪ್ಲೈಮಾಡಿ ಸಂಕ್ಷಾಪ್ಷ ಕಲ್ಲಿನಿಂದ ಕಟ್ಟುವದಕ್ಕೆ ಮಾತ್ರವೇ ಆಗಿ ಯಿದೆ.

ಅಣೆಕಟ್ಟು 1000 ಅಡಿ ಲಾಂಬಿ 8 ಅಡಿ ಅಗಲ ಸ್ಲೋಪು 1:4

ಕೆಲಸದ ವಿವರ.	ಕ್ಕೆ.	ಮೊತ್ತ.
ಸುರಂಗ	ಸಲೆಗಜ	8
ಕಲ್ಲು ಮೆಟ್ಲು ವೆಟ್ಟಾಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾದ ಮಟ್ಟು ಕಾವುಗಾರಿ	ಸೆಲೆಗಜ	180
ಸೊರ್ತಿಗಾರೆ ಕಲ್ಲು	ಸಲೆಅಡಿ	71004
ಸಂಕ್ಷಾಸುಮಾಡಿದ ಕಲ್ಲು ಸೊರ್ತಿಯಿಂದ ಕಟ್ಟಲು	ಡಿಟೋ	12767
ಸಂಕ್ಷಾಸುಮಾಡಿದ ಕಲ್ಲನ ಮಂಡೇರಿ	ಚದರಅಡಿ	6774
ಪೊರ್ಟ್‌ಲೆಂಟು ಯಾ ಶೇಮೆಸುಂಣದ ಸಂದುಗಾರೆ	ಚದರ	266·79
ಪೇಲಿಂಗು	ಮೊತ್ತ ರೂ.	
ಇನ್‌ಸ್ಪೆಕ್ಷನ್ ಲಾಡ್ಜ್	ಡಿಟೋ	

ತಾಮಸ್. ಇರ್ವಾರ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ನೋಟಿಫಿಕೇಷನ್.

ತಾರೀಖು 13–14ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಕೋಠಿಯಲ್ಲಿ ಇರತಕ್ಕ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರೆಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಯಂತ ಮೈಸೂರ ಗೆಜೆಟಿನಲ್ಲಿ ಘಾಯಿಷ್ ಮಾಡಲ್ಪಟ್ಟಿರುವದು